# ಕನ್ನಡದ ಆತ್ಮಕಥೆಗಳು ಮತ್ತು ಸುಮಿತ್ರಾಬಾಯಿಯವರ ಸೂಲಾಡಿ ಬಂದೋ ತಿರುತಿರುಗಿ

ಎಂ. ಮಹಾದೇವಪ್ರಭು,
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.

**ಕನ್ನಡದ ಆತ್ಮಕಥೆಗಳು** ಮತ್ತು ಸುಮಿತ್ರಾಬಾಯಿಯವರ **'ಸೂಲಾಡಿ ಬಂದೋ ತಿರುತಿರುಗೀ'**

ಸಾಹಿತ್ಯ ಎಂದರೆ ಎಲ್ಲರಿಗೂ ಸಂತೋಷ, ಹಿತವನ್ನು ಕೂಡುವಂತದ್ದು. ಅಂದರೆ ಸಹಿತವಾದುದೇ ಸಾಹಿತ್ಯ. ಕನ್ನಡ ಸಾಹಿತ್ಯಕ್ಕೆ ತನ್ನದೇ ಆದಂತಹ ಸಾವಿರಾರು ವರ್ಷಗಳ ಪರಂಪರೆಯಿದೆ. ಕನ್ನಡ ಸಾಹಿತ್ಯ ಜೈನ-ಶೈವ-ವೈದಿಕ ಮತಗಳ ಧಾರ್ಮಿಕ-ಆಗಮಿಕ ತತ್ವ ಸಂಗತಿಗಳಿಂದ ಪ್ರಭಾವಿತವಾಗಿ ಮೂಡಿಬಂದಿದೆ. ಛಂದೋಬದ್ಧ ಮಹಾಕಾವ್ಯಗಳೊಳಗೆ ಕವಿಗಳು ತಮ್ಮ ವ್ಯಕ್ತಿಗತ ಜೀವನದ ಆಸೆ ಆಕಾಂಕ್ಷೆಗಳನ್ನು ಕಾವ್ಯದೊಳಗಿನ ಪಾತ್ರಗಳ ಮೂಲಕ ಅಭಿವ್ಯಕ್ತಿಸಿದ್ದಾರೆ ಹೊರತು ನೇರವಾದ ಜೀವನದ ಸಂಗತಿಗಳನ್ನು ನಾವು ಕಾಣುವುದು ಸಾಧ್ಯವಿಲ್ಲ. ಉದಾಹರಣೆಗೆ ಪಂಪನ **ತೆಂಕಣಗಾಳಿ ಸೋಂಕಿದೊಡಂ...** ಮುಂತಾದ ಕನ್ನಡ ನಾಡಿನ ಪ್ರೇಮವನ್ನು ನಾವು ಗಮನಿಸಬಹುದು. ಇಂತಹ ವಿಚಾರಗಳನ್ನು ಬಿಟ್ಟರೆ ಅಲ್ಲಲ್ಲಿ ಕವಿಗಳು ಇತರ ಕವಿಗಳನ್ನು ಹೊಗಳಿಯೋ ತೆಗಳಿಯೋ ಬರೆದ ಕೆಲವು ಸಾಲುಗಳಷ್ಟೇ ಆ ಕವಿಗಳ ಬಗೆಗಿನ ಜೀವನದ ಸಂಗತಿಗಳಾಗಿ ಕಂಡುಬರುತ್ತವೆ. **ಬಸವರಾಜದೇವರ ರಗಳೆ, ಪ್ರಭುಲಿಂಗಲೀಲೆ, ಬಸವಪುರಾಣ, ಹರಿಹರ ಮಹತ್ವ** ದಂತಹ ಕೃತಿಗಳು ಕೃತಿಕಾರರ ಹಿಂದಿನ ಕವಿಗಳನ್ನು ಕುರಿತು ರಚನೆಯಾದ ಜೀವನಚರಿತ್ರೆಗಳೆಂದರೆ ತಪ್ಪಾಗಲಾರದು. ಆದರೆ ಸ್ವತಃ ಕವಿಗಳೇ ತಮ್ಮ ಆತ್ಮಕಥೆಗಳನ್ನು ಬರೆದಿರುವುದು ಅಲಭ್ಯ. ಆಧುನಿಕ ಕನ್ನಡ ಸಾಹಿತ್ಯದ ತುಂಬುಹೊಳೆ ಪಾಶ್ಚಾತ್ಯ ಸಾಹಿತ್ಯ ಪ್ರಕಾರಗಳಿಂದ ಪ್ರಭಾವಿತಗೊಂಡು ಅನೇಕ ಹೊಸ ಸಾಹಿತ್ಯ ಪ್ರಕಾರಗಳ ಝರಿಗಳನ್ನು ತನ್ನೊಡಲಲ್ಲಿ ತುಂಬಿಕೊಂಡು ವಿಸ್ತಾರವಾಗಿ ಹರಿಯುತ್ತಿದೆ. ಅವುಗಳಲ್ಲಿ ಜೀವನಚರಿತ್ರೆಗಳು, ಆತ್ಮಕಥೆ, ವ್ಯಕ್ತಿಚಿತ್ರಗಳೂ ಪ್ರಮುಖವಾಗಿವೆ.

ವ್ಯಕ್ತಿ ತನ್ನ ಜೀವನದ ಸಂಗತಿಗಳನ್ನು ತಾನೇ ಬರವಣಿಗೆಯ ಮೂಲಕ ನಿರೂಪಿಸಿದರೆ ಅದು ಆತ್ಮಕಥೆಯೆನಿಸಿಕೊಳ್ಳುತ್ತದೆ. ಒಬ್ಬರ ಜೀವನ ಸಂಗತಿಗಳನ್ನು ಮತ್ತೊಬ್ಬರು ಅಭಿವ್ಯಕ್ತಿಸಿದರೆ ಅದು ಜೀವನಚರಿತ್ರೆಯೆನಿಸುತ್ತದೆ. ವ್ಯಕ್ತಿಯ ಘಟನೆಗಳ, ವ್ಯಕ್ತಿತ್ವ, ಶೀಲ ವಿಚಾರಗಳ ಬಿಡಿಚಿತ್ರಗಳು ಕೂಡ ವ್ಯಕ್ತಿಚಿತ್ರಗಳಾಗಿ ಭಾಗಶಃ ಜೀವನಚರಿತ್ರೆಗಳಾಗುತ್ತವೆ. ಆತ್ಮಕಥೆಗಳು ವ್ಯಕ್ತಿಗಳ ಚರಿತ್ರೆಯಾಗಿರುವಂತೆ ಆತನ ಸುತ್ತಮುತ್ತಲ ಪರಿಸರದ ಸಂಗತಿಗಳಿಂದ, ವ್ಯಕ್ತಿ-ಘಟನೆಗಳಿಂದ ಕೂಡಿದ ಚರಿತ್ರೆಗಳೂ ಆಗಿರುತ್ತವೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕನ್ನಡದ ಜೀವನಚರಿತ್ರೆಗಳಿಗೆ ಸಂಬಂಧಿಸಿದಂತೆ ಗುರುತಿಸಬಹುದಾದ ಮೊದಲ ಕೃತಿಯೆಂದರೆ **ನಿಟ್ಟೂರು ಶ್ರೀನಿವಾಸರಾವ್** ದಂಪತಿಗಳಿಂದ ಭಾµÁAತರಗೊಂಡ ಗಾಂಧೀಜಿಯವರ ನನ್ನ ಸತ್ಯಶೋಧನೆ. ಕನ್ನಡದಲ್ಲಿ ಆತ್ಮಕಥೆಗಳನ್ನು ನೋಡುವುದಾದರೆ ಮೊಟ್ಟಮೊದಲಿಗೆ 1936ರಲ್ಲಿ ಮುದ್ರಣಗೊಂಡ ಹರ್ಡೇಕರ್ ಮಂಜಪ್ಪನವರ ನನ್ನ **ಮೂವತ್ತು ವರ್ಷಗಳ ಕಾಣಿಕೆ** ಸ್ವತಂತ್ರ ಆತ್ಮಚರಿತ್ರೆಯಾಗಿ ಕಂಡುಬರುತ್ತದೆ. ಹಾಗೆಯೇ ಕನ್ನಡದ ಮೊದಲ ಮಹಿಳಾ ಆತ್ಮಕತೆ ಮಳವಳ್ಳಿ ಸುಂದರಮ್ಮನವರ 'ಅಭಿನವ

ವಿಶಾರದೆ' ಯಾಗಿದೆ. 1974ರಲ್ಲಿ ಅರವಿಂದ ಮಾಲಗತ್ತಿಯವರು ಬರೆದ **ಗೌರ್ಮೆಂಟ್ ಬ್ರಾಹ್ಮಣ** ಮೊದಲ ಪ್ರಕಟಿತ ದಲಿತ ಆತ್ಮಕತೆಯಾಗಿದೆ. ಮಾಸ್ತಿಯವರ **ಭಾವ**, ಕುವೆಂಪು ಅವರ **ನೆನಪಿನ ದೋಣಿಯಲಿ**, ಕಾರಂತರ **ಹುಚ್ಚು ಮನಸ್ಸಿನ ಹತ್ತು ಮುಖಗಳು**, ಜಿ ಎಸ್ ಎಸ್ ಅವರ **ಚತುರಂಗ**, ಎಸ್ ಎಲ್ ಭೈರಪ್ಪರವರ **ಭಿತ್ತಿ**, ಪಿ. ಲಂಕೇಶ್‌ರ **ಹುಳಿಮಾವಿನಮರ**, ಸಿದ್ಧಲಿಂಗಯ್ಯನವರ **ಊರುಕೇರಿ**, ಗಿರೀಶ್ ಕಾರ್ನಾಡರ **ಆಡಾಡ್ತ ಆಯುಷ್ಯ**, ಯು. ಆರ್ ಅನಂತ ಮೂರ್ತಿಯವರ **ಸುರಗಿ**, ತೇಜಸ್ವಿಯವರ **ಅಣ್ಣನ ನೆನಪು** ಮುಂತಾದ ಅನೇಕ ಪ್ರಸಿದ್ಧ ಅತ್ಮಕಥನಗಳನ್ನು ಗಮನಿಸಬಹುದಾಗಿದೆ. ಇವಲ್ಲದೆ ಪ್ರಚಲಿತವಾಗಿರದ ಅನೇಕ ಆತ್ಮಕಥೆಗಳಿವೆ. ಕೆಲವು ಆತ್ಮಕಥೆಗಳನ್ನು ಹೀಗೆ ಪಟ್ಟಿ ಮಾಡಬಹುದು :

ಜಿ.ಪಿ ರಾಜರತ್ನಂ ಅವರ **ಹತ್ತುವರುಷ**, ನವರತ್ನ ರಾಮರಾಯರ ಕೆಲವು ನನ್ನ **ನಾಲ್ಕು ನೆನಪುಗಳು**, ನನ್ನ **ನಾನೆ ಕಂಡೆ** ಮತ್ತು **ಸಾಹಿತಿಯ ಆತ್ಮಜಿಜ್ಞಾಸೆ**, ದ.ರಾ.ಬೇಂದ್ರೆಯವರ **ಚತುರ್ಮುಖ**, ವಾಸುದೇವಾಚಾರ್ಯರ **ನೆನಪುಗಳು**, ಡಿ.ವಿ.ಜಿ.ಯವರ **ಜ್ಞಾಪಕ ಚಿತ್ರಶಾಲೆ**, ಗುಬ್ಬಿವೀರಣ್ಣ ಅವರ **ಕಲೆಯೇ ಕಾಯಕ**, ದೇ.ಜ.ಗೌ ಅವರ **ಹೋರಾಟದ ಬದುಕು** ವೀ.ಸೀತಾರಾಮಯ್ಯನವರ **ಕಾಲೇಜು ದಿನಗಳು** ಮತ್ತು **ಮುಂಬಾಯಿ ವಾಸದ ನೆನಪುಗಳು**, ಅ.ನ.ಕೃ ಅವರ **ಬರಹಗಾರನ ಬದುಕು**, ಆಲೂರು ವೆಂಕಟರಾಯರ ನನ್ನ **ಜೀವನ ಸ್ಮೃತಿಗಳು**, ಆರ್. ನಾಗೇಂದ್ರರಾವ್ ಅವರ **ಇದು ನನ್ನಕಥೆ**, ಬಸವರಾಜ ಕಟ್ಟೀಮನಿಯವರ **ಕುಂದರನಾಡಿನ ಕಂದ** ಮತ್ತು **ಕಾದಂಬರಿಕಾರನ ಬದುಕು**, ಬೀಚಿಯವರ ನನ್ನ **ಬಯೋಗ್ರಫಿ**, ಶ್ರೀರಂಗರಾಜರ **ನಾನು ತುಳಿದ ಹಾದಿ**, ಇ.ಎ.ಪ್ರಸನ್ನ ಅವರ **ಪ್ರಸನ್ನ ಜೀವನ ಒಂದು ಆತ್ಮಕಥೆ**, ಜತ್ತಪ್ಪ ರೈ ಅವರ **ಈಡೊಂದು ಹುಲಿಯೆರಡು** ಮತ್ತು **ಭೇಟೆಯ ನೆನಪುಗಳು**, ಬಿ.ಜಿ. ಎಲ್ ಸ್ವಾಮಿಯವರ **ಪ್ರಾಧ್ಯಾಪಕನ ಪೀಠದಲ್ಲಿ**, ಜೋಳದರಾಶಿ ದೊಡ್ಡನಗೌಡರ **ನಂದೇ ನಾನೋದಿದೆ**, ಶೇ.ಗೂ. ಕುಲಕರ್ಣಿಯವರ **ನಾನು ಕಂಡ ಗೆಳೆಯರ ಗುಂಪು**, ಡಿ. ಕೆಂಪರಾಜ ಅರಸ್ ಅವರ **ಅರವತ್ತು ವರ್ಷಗಳು**, ತ.ರಾ.ಸು ಅವರ **ಹಿಂತಿರುಗಿ ನೋಡಿದಾಗ**, ತ.ಸು.ಶಾಮರಾಯರ **ನೆನಪಿನ ಅಲೆಗಳು**, ಬಿ.ವಿ.ಕಾರಂತರ **ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ** ಮುಂತಾದವು

ಮಹಿಳಾ ಅತ್ಮಕಥೆಗಳಾಗಿ ಮಳವಳ್ಳಿ ಸುಂದರಮ್ಮನವರ **ಅಭಿನವ ವಿಶಾರದೆ**, ಶಾರದಾ ವಿ. ಗೋಕಾಕ್ ಅವರ **ಒಲವೇ ನಮ್ಮ ಬದುಕು**, ಬಿ.ಜಯಮ್ಮನವರ **ಅಭಿನೇತ್ರಿ**, ಚಿ.ನ.ಮಂಗಳ ಅವರ **ಅಧ್ಯಾಪಕಿಯಾಗಿ 25 ವರ್ಷ** ಮತ್ತು **ಸ್ನೇಹ ಸಿಂಧೂ** , ಅನುಪಮ ನಿರಂಜನರ **ನೆನಪು ಸಿಹಿ ಕಹಿ** ಮತ್ತು **ಬರಹಗಾರ್ತಿಯ ಬದುಕು**. ರಾಜೇಶ್ವರಿಯವರ **ನನ್ನತೇಜಸ್ವಿ**. ತಾರಿಣಿಯವರ **ಮಗಳು ಕಂಡ ಕುವೆಂಪು**. ಪ್ರೇಮ ಕಾರಂತರ **ಸೋಲಿಸಬೇಡಯ್ಯ ಗೆಲ್ಲಿಸಯ್ಯ**, ಮಲ್ಲಿಕಾ ಕಡಿದಾಳ್ ಅವರ **ನೆನಪುಗಳು**, ಪ್ರತಿಭಾನಂದ ಕುಮಾರ್ ಅವರ **ಅನುದಿನದ ಅಂತರಗಂಗೆ** ಹೀಗೆ ಇನ್ನೂ ಅನೇಕ ಆತ್ಮಕಥೆಗಳನ್ನು ಗುರುತಿಸಬಹುದಾಗಿದೆ.

ದಲಿತ ಆತ್ಮಕಥೆಗಳಾಗಿ ಪ್ರಸಿದ್ಧಿಗೆ ಬಾರದಿರುವ ತುಂಬಾಡಿ ರಾಮಯ್ಯನವರ **ಮಣೆಗಾರ** ಮತ್ತು **ಮುತ್ತಿನ ಜೋಳ**, ಕೆ.ಗೋವಿಂದರಾಜು ಅವರ **ಮನವಿಲ್ಲದವರ ಮಧ್ಯೆ**, ಲಕ್ಷ್ಮಣರ **ಸಂಭೋಳಿ**, ಎಸ್.ಪಿ ಸುಳ್ಳಾದ್‌ರ **ಅಸ್ಪೃಶ್ಯನ ಭವಾನುಭವ** ಮುಂತಾದ ಇನ್ನು ಅನೇಕ ಆತ್ಮಕಥನಗಳನ್ನು ಗುರುತಿಸಬಹುದಾಗಿದೆ.

ಇವಲ್ಲದೆಯೆ ಲಿಂಗಪರಿವರ್ತನೆಗೆ ಒಳಗಾದ ಮಂಗಳಮುಖಿಯರ ಆತ್ಮಕಥೆಗಳೂ ರಚನೆಯಾಗುತ್ತಿವೆ. ಉದಾಹರಣೆಗೆ ಇತ್ತೀಚೆಗೆ ತಮಿಳಿನ ವಿದ್ಯಾ ಎಂಬ ಲಿಂಗಪರಿವರ್ತಿತ ಹೆಣ್ಣುಮಗಳ ಆತ್ಮಕಥೆ **ನಾನು ಅವನಲ್ಲ ಅವಳು** (ಅನುವಾದ ತಮಿಳ್ ಸೆಲ್ವಿ) ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಗೊಂಡಿದೆ. ಇದು ಕನ್ನಡದಲ್ಲಿ ಸಿನಿಮಾವೂ ಆಗಿ ದಿವಂಗತ ಸಂಚಾರಿ ವಿಜಯ್ ನಟನೆಗೆ ರಾಷ್ಟ್ರಪ್ರಶಸ್ತಿಯನ್ನು ಅವರ ಮುಡಿಗೇರಿಸಿತು. ಹಾಗೆಯೇ ದು.ಸರಸ್ವತಿಯವರ ಅನುವಾದಿತ ಕೃತಿ **ಬದುಕು ಬಯಲು** ಶರವಣ ರೇವತಿಯಾದ ಕಥೆಯನ್ನು ಹೇಳುತ್ತದೆ. **ನಡುವೆ ಸುಳಿವ ಹೆಣ್ಣು** ಎಂಬುದು ಮಂಜುನಾಥನು ಕಲಾವಿದೆ ಮಂಜಮ್ಮ ಜೋಗತಿಯಾಗಿ ಬೆಳೆದ ಅವರ ಆತ್ಮಕಥೆ. ಅರುಣ ಜೋಗದ

ಕೂಡ್ಲಿಗಿ ಇದನ್ನು ಬರೆದಿದ್ದಾರೆ. ಈ ನಿಟ್ಟಿನಲ್ಲಿ **ಅಕ್ಕೈ ಪದ್ಮಶಾಲಿ**ಯವರ ಆತ್ಮಕಥೆಯನ್ನೂ ಗಮನಿಸಬಹುದು. ಈ ಅತ್ಮಕಥೆಗಳು ಪ್ರಕಟವಾದ ನಂತರದಲ್ಲಿ ಆ ವರ್ಗದವರನ್ನು ನೋಡುವ ಸಮಾಜದ ದೃಷ್ಟಿಕೋನವು ಮಾನವೀಯಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.

ಬಹುಪಾಲು ಆತ್ಮಕಥೆಗಳು ಚರಿತ್ರೆಯೂ ಆಗಿ ಕಥನಾಂಶವುಳ್ಳ ಕಲಾತ್ಮಕ ಕೃತಿಗಳೂ ಆಗಿವೆ. ಇಂಥ ಕಥನಾತ್ಮಕ ಕಲಾಕೃತಿಯಾಗಿ, ದೇವನೂರು ಮಹಾದೇವ ಅವರ ಪತ್ನಿ ಬರೆದ ಆತ್ಮಚರಿತ್ರೆ ಎಂಬ ಕಾರಣದಿಂದ ಕುತೂಹಲಕ್ಕೆ ಕಾರಣವಾಗಿ ತನ್ನ ಶೀರ್ಷಿಕೆಯಿಂದಲೇ ಗಮನಸೆಳೆಯುವ ಆತ್ಮಕಥೆ **ಸೂಲಾಡಿ ಬಂದೋ ತಿರುತಿರುಗಿ**. ಶೀರ್ಷಿಕೆಯಲ್ಲಿಯೇ ವ್ಯಕ್ತವಾಗುವಂತೆ ಬಹುಪಾಲು ಭಾರತೀಯ ಹೆಣ್ಣುಮಕ್ಕಳು ತಮ್ಮ ಬದುಕಿನ ಹೋರಾಟಗಳಲ್ಲಿ ಸತ್ತು ಮತ್ತೆ ಮತ್ತೆ ಹುಟ್ಟಿ(ಸೂಲಾಡಿ)ಬಂದಿರುವುದನ್ನು ತಮ್ಮ ಆತ್ಮಕಥೆಯಲ್ಲಿ ಸಾಕೇತಿಕವಾಗಿ ತಮ್ಮ ಬದುಕಿನ ಕಥನವಾಗಿ ಸುಮಿತ್ರಾಬಾಯಿಯವರು ಈ ಕೃತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

**ಸೂಲಾಡಿ ಬಂದೋ ತಿರುತಿರುಗಿ-ಬಾಳಕಥನ**

ಈ ಆತ್ಮಕಥನದ ಲೇಖಕಿ **ಪ್ರೊ. ಕೆ ಸುಮಿತ್ರಾಬಾಯಿ**ಯವರು. ಕೆ.ಸುಮಿತ್ರಾಬಾಯಿ ಅವರು ಮಂಡ್ಯದಲ್ಲಿ ಜನಿಸಿದರು. ತಂದೆ ಕೆ.ಕೃಷ್ಣಯ್ಯ ತಾಯಿ ಚಿಕ್ಕತಾಯಮ್ಮ, ಈ ದಂಪತಿಗಳಿಗೆ ಹುಟ್ಟಿದ ಹತ್ತು ಮಕ್ಕಳಲ್ಲಿ ಸುಮಿತ್ರಾ ಎರಡನೆಯವರು ಮೊದಲಿಗೆ ದೇವನೂರು ಮಹಾದೇವ ಅವರ ಪತ್ನಿ ಎಂಬ ಆಕರ್ಷಣೆಯಿಂದ ಓದುಗರ ಗಮನ ಸೆಳೆಯುವ ಈ ಕೃತಿ, ಓದಿಯಾದ ಮೇಲೆ ಸಶಕ್ತವಾದ ನಿರೂಪಣೆಯಿಂದ ಕೂಡಿದ, ಪ್ರಜ್ಞಾವಂತ, ಶಿಕ್ಷಿತ ಹೆಣ್ಣುಮಕ್ಕಳ ಜೊತೆಗೆ ಅನೇಕ ಗಂಡುಮಕ್ಕಳ ಭಾಗಶಃ ಬಾಳಕಥನವೇ ಆಗಿದೆ. ಕೆ.ಸುಮಿತ್ರಾಬಾಯಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಾಪು ಮೂಡಿಸುವಷ್ಟು ಸಾಹಿತ್ಯವನ್ನು ರಚಿಸದಿದ್ದರೂ ತಮ್ಮ ಆತ್ಮಕಥನ "ಸೂಲಾಡಿ ಬಂದೋ ತಿರುತಿರುಗೀ' ' ಕೃತಿಯ ಮೂಲಕ ಪ್ರವೇಶಿಸಿ ಅದರಲ್ಲಿಯೇ ಅಪಾರ ಓದುಗ ಬಳಗವನ್ನು ಹೊಂದಿದ್ದಾರೆ. ಇವರು ಸಮಾಜಶಾಸ್ತ್ರ ವಿದ್ಯಾರ್ಥಿನಿಯಾಗಿದ್ದರೂ ಸಾಹಿತ್ಯದ ಗಂಭೀರ ಓದುಗರು. ಅಲ್ಲಲ್ಲಿ ಅದನ್ನು ಮೌಲ್ಯಮಾಪನ ಮಾಡಿ ಈ ಕೃತಿ ರಚಿಸಿದ್ದಾರೆ. ಹಾಗಾಗಿಯೇ ಆತ್ಮಕಥನವು ಅದ್ಭುತ ಸೃಜನಶೀಲ ಕೃತಿಯಾಗಿ ಭಿನ್ನ ನೆಲೆಗಳಲ್ಲಿ ಮೂಡಿಬಂದಿದೆ. ಸಮಾಜಶಾಸ್ತ್ರದ ಪ್ರಾಧ್ಯಪಕರಾಗಿದ್ದರೂ ಗ್ರಾಮೀಣ ಬದುಕಿನ ಹೊಕ್ಕುಳ ಬಳ್ಳಿ ಸಂಬಂಧವನ್ನು ಕಳೆದುಕೊಳ್ಳದೆ. ತನ್ನ ಜೀವನದ ಸಂಕಷ್ಟಗಳನ್ನು ಸೂಕ್ಷ್ಮಸಂವೇದನೆಯಿಂದ ತಮ್ಮ ಆತ್ಮಕಥನದಲ್ಲಿ ದಾಖಲಿಸಿರುವುದು ಪ್ರಸಂಸಾರ್ಹ.

ನೈಜ ಬದುಕಿನ ಘಟನೆಗಳನ್ನು ಆಧರಿಸಿದ ಎಲ್ಲ ಕೃತಿಗಳೂ ಸಾಹಿತ್ಯ ವಲಯದಲ್ಲಿ ಹೆಗ್ಗುರುತುಗಳಾಗುವುದಿಲ್ಲ. ಜೀವನವು ಬರಿಯ ಸಂತೋಷದ ಬುತ್ತಿಯಲ್ಲ. ಸಿಹಿ ಮತ್ತು ಕಹಿ ನೆನಪುಗಳನ್ನು ಹೊಂದಿರುತ್ತದೆ. ಸಿಹಿ ಘಟನೆಗಳು ಓದುಗರ ಮನಕ್ಕೆ ಸಂತಸ ನೀಡಿದರೆ, ಕಹಿ ಘಟನೆಗಳು ಮಾರ್ಗದರ್ಶನ ನೀಡುತ್ತವೆ. ಯಾವುದೇ ಅನುಭವಗಳು ಅಳಿದು ಹೋಗುವ ಮುನ್ನ ಪ್ರಾಮಾಣಿಕವಾಗಿ ದಾಖಲಿಸಿದರೆ ಅವು ಜೀವಂತ ಕಥಾರೂಪವನ್ನು ಪಡೆಯುತ್ತವೆ. ಸುಮಿತ್ರಾಬಾಯಿಯವರು ತಮ್ಮ ಜನನ, ಬಾಲ್ಯ, ಶಿಕ್ಷಣ, ಬದುಕು, ಬರಹ, ಗ್ರಾಮೀಣ ಸೊಗಡು, ತಮ್ಮ ಸುತ್ತಮುತ್ತಲಿನ ಪರಿಸರ, ಬರಹಗಾರರ ಜೊತೆ ನಿರಂತರ ಒಡನಾಟಗಳು ಹಾಗೂ ಪ್ರೇರಕ ಪ್ರಭಾವಗಳೊಂದಿಗೆ ತಮ್ಮ ಜೀವಾನನುಭವನಗಳ ಸತ್ಯ ಅಸತ್ಯತೆಗಳನ್ನು ಅನನ್ಯ ಮೌಲ್ಯಯುತ ವಿಚಾರಗಳನ್ನು ಹೊಸ ಬೆಳಕು ಕಾಣುವಂತೆ ಹಲವು ಆಯಾಮಗಳ ಮೂಲಕ ತಮ್ಮ ಹಾಗೂ ಹಲವರ ವ್ಯಕ್ತಿತ್ವದ ಬುತ್ತಿಯನ್ನು 'ಸೂಲಾಡಿ ಬಂದೋ ತಿರುತಿರುಗೀ' ಆತ್ಮಕಥನದ ಮೂಲಕ ಉಣಬಡಿಸಿದ್ದಾರೆ.

ಲೇಖಕಿ ಈ ಕೃತಿಯನ್ನು ಬಾಳಕಥನವೆಂದು ಕರೆದಿದ್ದಾರೆ. ''**ಸೂಲಾಡಿ ಬಂದೋ ತಿರುತಿರುಗಿ - ಬಾಳ ಕಥನ**' ಲೇಖಕಿಯ ಜೀವನ ಸಂಗತಿಗಳನ್ನು ಒಳಗೊಂಡಿದ್ದರೂ ಅದು ಓದುಗರ ಆಪ್ತಸಂಗತಿಗಳೂ ಆಗಿಬಿಡುತ್ತವೆ' ' (ಕೃಷ್ಣಮೂರ್ತಿ ಹನೂರು, ಬೆನ್ನುಡಿ) ಎಂಬ

ಮಾತು ಸರಿಯಾಗಿದೆ. ಆತ್ಮಕಥನದ ಮಾದರಿಯಲ್ಲಿ ಬದುಕಿನ ನಾನಾ ಪಾತ್ರಗಳ, ನಮಗೆ ಪರಿಚಯವಿಲ್ಲದ ಮುಖಗಳ, ವ್ಯಕ್ತಿತ್ವಗಳ ಪರಿಚಯವಿಲ್ಲಿದೆ. ಈ ಪಾತ್ರಗಳು ಓದುವ ಎಲ್ಲರ ಜೀವನದಲ್ಲಿಯೂ ಸಂಧಿಸುತ್ತವೆ. 48 ಹೆಜ್ಜೆ(ಭಾಗ)ಗಳಲ್ಲಿ ಮೂಡಿಬಂದಿರುವ ಈ ಕಥನ 2018ರ ಜೂನ್ ಮಾಹೆಯಲ್ಲಿ ಪ್ರಕಟವಾಗಿದೆ. **ಸೂಲಾಡಿ ಬಂದೋ ತಿರುತಿರುಗೀ** ಕೃತಿಗೆ 2018 ರ ಸಾಲಿನ ಪುಸ್ತಕ ಬಹುಮಾನ ಸಾಹಿತ್ಯ ಅಕಾಡೆಮಿಯಿಂದ ಲಭಿಸಿದೆ. 328 ಪುಟಗಳಲ್ಲಿ ಹರಡಿರುವ ಈ ಕೃತಿಯ ಕೊನೆಯಲ್ಲಿ ಲೇಖಕಿಯ ಜೀವನದ ಮಹತ್ವದ ಘಟನೆಗಳ ಭಾವಚಿತ್ರಗಳನ್ನೂ ಕಾಣಬಹುದಾಗಿದೆ.

ಈ ಕೃತಿಯು 48 ಭಾಗ(ಹೆಜ್ಜೆ)ಗಳಲ್ಲಿ ಹರಡಿದೆ. ಕೃತಿಯ ಒಳಗೆ ಸ್ಥೂಲವಾಗಿ ಇಣುಕಿದಾಗ **ನಾ ಹುಟ್ಟುವ ಮುನ್ನ, ಹೆಣ್ಣು ಜಲ್ಮ, ಮತ್ತೆ ಮತ್ತೆ ಅಜ್ಜಿ, ಅಕ್ಕರೆ ತುಂಬಿದ ಇಬ್ಬರು ತಾತಂದಿರು,** ನನ್ನ ಅಪ್ಪ ಅಮ್ಮ- ಈ ಐದು ಭಾಗಗಳು ಲೇಖಕಿಯ ಜನನ-ಬಾಲ್ಯದ ಸಂಗತಿಗಳನ್ನು ಕಟ್ಟಿಕೊಡುತ್ತವೆ. ಮುಂದೆ **ಸಾವ್ದೆ ಮಿಷನ್ ಸ್ಕೂಲ್‌ನಲ್ಲಿ ಅಆಇಈ, ನೆನೆವುದೆನ್ನ ಮನ, ನಮ್ಮೂರ ಹಬ್ಬ ಅಂದರೆ ಹಬ್ಬ, ಸಾವು ಬದುಕಿನ ನಡುವೆ, ಗೋಮಾಳ ಎಂದರೆ ಗೋಮಾಳ ಮಾತ್ರವಲ್ಲ, ಅತ್ತೆ ಕಂ ಗೆಳತಿ ಸಿದ್ದತ್ತೆ, ಇಬ್ಬರು ಲೆಜೆಂಡ್ರಿಗಳು ಬೊಮ್ಮಯ್ಯಗಳು, ಸಂತೆಲೋಕ -** ಈ 10 ಭಾಗಗಳು ಬಾಲ್ಯಾವಸ್ಥೆಯ ಮಧುರ ಭಾವಗಳ ಜೊತೆಗೆ ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣ ವಿಚಾರಗಳನ್ನು ಕುರಿತಿದೆ. **ಮಿಡ್ಲುಸ್ಕೂಲ್ ಮುಗಿಸಿ ಹೈಸ್ಕೂಲ್ ಹತ್ತಿದೆ, ನನ್ನ ಹೆಸರೂ ತಾಹೆರಾ, ಸೈಕಲ್** ಕನಸು, **ಹೀಗೊಂದು ನಮ್ಮ ಉಪವಾಸ ಸತ್ಯಾಗ್ರಹ, ಜುಬೇದಾ ಹಾಗೂ ಲೀಲಾವತಿ, ಸಮಾಜಶಾಸ್ತ್ರದ ಪ್ರಥಮ ಬ್ಯಾಚ್, ಡಿಗ್ರಿ ಮೇಲೆ ಕೆಂಗಣ್ಣು-**ಈ 7 ಹೆಜ್ಜೆಗಳಲ್ಲಿ ಪ್ರೌಢಾವಸ್ಥೆಯ ಮಿಳಿತಗಳ ಜೊತೆ ಹೈಸ್ಕೂಲು-ಪದವಿ-ಸ್ನಾತಕೋತ್ತರ ಶಿಕ್ಷಣ ಪಡೆದ ವಿವರಗಳಿವೆ. ಅಧ್ಯಾಪಕಿಯಾಗಿ ಕಳೆದ ದಿನಗಳ ಬಗ್ಗೆ **ಅಧ್ಯಾಪಕಿಯಾಗಿ ಮೊದಲ ದಿನಗಳು, ರೈಲು ಜೀವನ ಪಾಠ, ಹೊಸಲೋಕ-** ಈ ಭಾಗಗಳಲ್ಲಿ ಕಾಣಬಹುದಾಗಿದೆ. ಮುಂದಿನ 25 ಹೆಜ್ಜೆಗಳಲ್ಲಿ ಲೇಖಕಿಯ ಮದುವೆ-ಮರುಮದುವೆ-ದಾಂಪತ್ಯ-ದೇವನೂರರ ವ್ಯಕ್ತಿತ್ವ - ದಲಿತ ಚಳುವಳಿ - ಉದ್ಯೋಗದ ಉನ್ನತಿ ಮುಂತಾದ ಅನೇಕ ವಿಚಾರಗಳನ್ನು ಗ್ರಹಿಸಬಹುದಾಗಿದೆ.

ಕೃತಿಯ ಆರಂಭದ **ನಾ ಹುಟ್ಟುವ ಮುನ್ನ** ಎಂಬ ಮೊದಲ ಭಾಗವು ಲೇಖಕಿಯ ವಂಶಾವಳಿಯ ಕಥನವಾಗಿ ರಂಜನೀಯವಾಗಿದೆ. ಲೇಖಕಿಯ ಪೂರ್ವಜ ನಂಜನಗೂಡಿನ ನೇರಳೆ ಭಾಗದಿಂದ ಬಂದು ಮಂಡ್ಯದಲ್ಲಿ ಗುಡಿಸಲು ಕಟ್ಟಿ ಬಾಳಿದ ವಿಚಾರವಿಲ್ಲಿದೆ. ಇಲ್ಲಿ ಜಾತ್ಯಾತೀತ ಪ್ರೇಮ ಮತ್ತು ಮಾನವೀಯ ಸಂಬಂಧಗಳ ಬಗೆಗಿನ ಸೂಕ್ಷ್ಮವಿಚಾರ ಸಂವಹನವಾಗುತ್ತದೆ. ಎರಡನೆಯ ಭಾಗ ಹೆಣ್ಣುಮಕ್ಕಳ ಜೀವನಗಾಥೆಯಾಗಿದೆ. ಲೇಖಕಿ **ಹೆಣ್ಣುಜಲ್ಮ** ಎಂದೇ ಈ ಭಾಗಕ್ಕೆ ಉಪಶೀರ್ಷಿಕೆ ಕೊಟ್ಟಿದ್ದಾರೆ. ಲೇಖಕಿಯ ತಾಯಿಯ ತಾಯಿ(ಅಜ್ಜಿ)ಯು ಶೋಷಣೆಗೆ ಒಳಗಾಗುವ ಸಂಗತಿಯು ಅಂದಿನ ದಿನಗಳ ಬಹುಪಾಲು ಸ್ತ್ರೀಯರ ಬದುಕಿನ ಸಂಕೇತದಂತಿದೆ. ಮುಂದಿನ **ಪದೇ ಪದೇ ಅಜ್ಜಿ** ಎಂಬ ಮೂರನೆಯ ಹೆಜ್ಜೆಯಲ್ಲಿ ಲೇಖಕಿಯ ಬಾಲ್ಯದ ಸಂಗತಿಗಳೊಡನೆ ಅಜ್ಜಿಯ ಬದುಕಿನ ಸವಿಯೂ ಕಂಡುಬರುತ್ತದೆ. ಗ್ರಾಮ್ಯ ಸಂಪ್ರದಾಯಗಳ ಆಟಗಳ ಮೆಲುಕು ಇಲ್ಲಿದೆ. ಅದರಲ್ಲೂ ಅಜ್ಜಿಯೊಡನೆ ಲೇಖಕಿಯಾಡುವ ಅಳ್ಳುಗುಳಿ ಮನೆಯಾಟ ಎಲ್ಲ ವಯೋಮಾನದ ಓದುಗರನ್ನೂ ಅವರವರ ಬಾಲ್ಯದ ಸವಿಯಾದ ಆಟದೊಳಕ್ಕೆ ಕರೆದೊಯ್ಯುತ್ತದೆ.

**ಸಾವ್ದೆ ಮಿಷನ್ ಸ್ಕೂಲ್‌ನಲ್ಲಿ, ಅಆಇಈ** ಹೆಜ್ಜೆಗಳಲ್ಲಿ ಸಾವ್ದೆ ಮಿಷನ್ ಸ್ಕೂಲ್‌ನಿಂದ ಇವರ ಶಿಕ್ಷಣ ಪ್ರಾರಂಭವಾದುದು, ಶಿಕ್ಷಣ ಕಲಿತ ಬಗೆಯನ್ನು ತಿಳಿಸುತ್ತದೆ. ಅಲ್ಲಿನ ಶಿಕ್ಷಕರಾದ ಸುಂದರ ಮಾಸ್ಟರ್ ಅವರ ಆದರ್ಶ, ಎಲ್ಲರನ್ನು ಒಂದೇ ರೀತಿಯಲ್ಲಿ ನೋಡುವ ಅವರ ಮನೋಬಾವ, ಅವರ ಆದರ್ಶ, ಮಕ್ಕಳ ಗ್ರಹಿಕೆಗೆ ತಕ್ಕಂತೆ ಪಾಠ ಮಾಡುತ್ತಾ, ನೀತಿ ಕಥೆಗಳನ್ನು ಹೇಳುವುದರ ಜೊತೆಗೆ ಮಕ್ಕಳಿಂದಲೇ ನಾಟಕವನ್ನು ಮಾಡಿಸುತ್ತಿದ್ದದ್ದು, **"ಓದದಿದ್ದರೆ ತೌಡೇ ಗತಿ"** ಎಂದು ಮಕ್ಕಳಿಗೆ ಹೇಳುತ್ತಿದ್ದ ಸಾಲುಗಳು ಅದರಿಂದ ಮಕ್ಕಳು ಪ್ರಭಾವಿತರಾದುದು-ಹೀಗೆ ಲೇಖಕಿ ಸ್ಫೂರ್ತಿಗೊಂಡ, ಶಿಕ್ಷಿತಳಾದ ವಿವರಗಳನ್ನು ಕಟ್ಟಿಕೊಡುತ್ತದೆ. **ನೆನೆವುದೆನ್ನ ಮನ, ನಮ್ಮೂರ ಹಬ್ಬ ಅಂದರೆ ಹಬ್ಬ,** ಈ ಮುಂತಾದ ಹೆಜ್ಜೆಗಳು ಇವರ ಊರ ಹಬ್ಬಗಳ ಸುಂದರ ಕ್ಷಣಗಳನ್ನು ಕಟ್ಟಿಕೊಡುತ್ತವೆ. ಸಂಕ್ರಾತಿಯ ಹಬ್ಬದ ಸಂದರ್ಭದ

ಪ್ರಾಣಿಗಳ ಅಲಂಕಾರದ ದೃಶ್ಯಾವಳಿಗಳು ಕಣ್ಣಿಗೆ ಕಟ್ಟುವಂತಿದೆ. ಯುಗಾದಿ ಹಬ್ಬದ ಉಯ್ಯಾಲೆ ನೆನಪುಗಳನ್ನು ನೆನೆದು `**ನನ್ನನ್ನೂ ಉಯ್ಯಾಲೆ ಮೇಲೆ ಕೂರಿಸಿ ತೂಗುತ್ತಲಿವೆ**' ಎಂದು ಲೇಖಕಿ ನೆನಪಿನ ಅಂಗಳದಲ್ಲಿ ತೇಲುವುದು ಕಂಡು ಬರುತ್ತದೆ. ಈ ಹಬ್ಬಗಳು ಪ್ರಸ್ತುತದ ಸಂದರ್ಭದಲ್ಲಿ ಆಚರಣೆಯಲ್ಲಿದ್ದರೂ ಕೂಡ ಅವು ಹಿಂದಿನ ಕಾಲದ ಸಂಪ್ರದಾಯಗಳಿಂದ ಸಂತಸ, ಸಂಭ್ರಮದ ಆಚರಣೆಗಳಿಂದ ಕಣ್ಮರೆಯಾಗುತ್ತಿರುವುದನ್ನು ವಿಷಾದದಿಂದ ನೆನೆಯುವಂತೆ ಕೃತಿ ನೆನಪುಗಳನ್ನು ಕಟ್ಟಿಕೊಡುತ್ತದೆ. ಲೇಖಕಿಯ ಬಾಲ್ಯದಲ್ಲಿ ಸಿದ್ದತ್ತೆ ಅವರು ಲೇಖಕಿಯನ್ನು ತಾಯಿಯ ಹಾಗೆಯೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇವರಿಗೆ ಎಲ್ಲಾ ವಿಷಯದಲ್ಲಿ ಪ್ರೋತ್ಸಾಹ ನೀಡುತ್ತಿದ್ದರು. ಎಂಬುದು **ಅತ್ತೆ ಕಂ ಗೆಳತಿ ಸಿದ್ಧತ್ತೆ** ಭಾಗದಲ್ಲಿ ಕಂಡುಬರುತ್ತದೆ. ಬಾಲ್ಯದಲ್ಲಿ ಅಜ್ಜಿಯ ಜೊತೆ ಹೆಚ್ಚು ಒಡನಾಟವಿದ್ದ ಕಾರಣ ಅಜ್ಜಿಯ ಜೊತೆ ಆಟವಾಡುತ್ತಿದ್ದದ್ದು, ಸಂತೆಗೆ ಅಜ್ಜಿ ಜೊತೆ ಹೋಗುತ್ತಿದ್ದದ್ದು. ಬಾಲ್ಯದಲ್ಲಿ ಸೈಕಲ್ ಕಲಿಯಬೇಕುಯೆಂಬ ಆಸೆ, ಆದರೆ ಹೆಣ್ಣು ಮಕ್ಕಳು ಸೈಕಲ್ ಓಡಿಸುವುದು ತಪ್ಪೆಂಬ ಭಾವನೆ, ಅದು ಗಂಡು ಮಕ್ಕಳು ಮಾತ್ರ ಕಲಿಯಬೇಕು ಎನ್ನುವ ಮನೋಭಾವ ಮತ್ತು ಹೈಸ್ಕೂಲ್ ಓದುತ್ತಿದ್ದಾಗ ತಮ್ಮಂದಿರ ಜೊತೆ ಅಮ್ಮನ ವಿರೋಧ, ಉಪವಾಸ ಸತ್ಯಾಗ್ರಹ ಮಾಡಿದುದು ಈ ಮುತಾದ ವಿಚಾರಗಳನ್ನು **ಮಿಡ್ಲ ಸ್ಕೂಲ್ ಮುಗಿಸಿ ಹೈಸ್ಕೂಲ್ ಹತ್ತಿದೆ, ನನ್ನ ಹೆಸರೂ ತಾಹೆರಾ, ಸೈಕಲ್ ಕನಸು, ಹೀಗೊಂದು ನಮ್ಮ ಉಪವಾಸ ಸತ್ಯಾಗ್ರಹ** ಮುಂತಾದ ಹೆಜ್ಜೆಗಳಲ್ಲಿ ಕಾಣುತ್ತೇವೆ.

ಜೀವನದ ಯೌವನದ ಕಾಲಘಟ್ಟದಲ್ಲಿ ಆದರಲ್ಲೂ ಹೆಣ್ಣು ಮಕ್ಕಳ ಶೈಕ್ಷಣಿಕ ಜೀವನದಲ್ಲಿ ಸಾಕಷ್ಟು ಕಷ್ಟ, ಸವಾಲು, ತಿರುವುಗಳು ಬರುತ್ತವೆ. ಆದರೆ ಯಾವುದೇ ಸವಾಲು, ತಿರುವಿಗೆ ಪರಿಹಾರದ ಆಯ್ಕೆ ಅವರವರ ನಿರ್ಧಾರದ ಮೇಲೆಯೇ ನಿಂತಿರುತ್ತದೆ. ಸುಮಿತ್ರ ಬಾಯಿಯವರ ಜೀವನದಲ್ಲಿಯೂ ಯೌವನದಲ್ಲಿ ನಡೆದ ಘಟನೆಗಳು ಅವರ ಜೀವನಕ್ಕೆ ತಿರುವು ಕೊಟ್ಟ ಘಟನೆಗಳು, ಅವರ ಸ್ನೇಹಿತೆಯರ ಜೀವನದಲ್ಲಿ ನಡೆದತಂಹ ದುರಂತದ ವಿಚಾರಗಳು **ಜುಬೇದಾ ಹಾಗೂ ಲೀಲಾವತಿ** ಎಂಬ ಹೆಜ್ಜೆಗಳಲ್ಲಿ ಕಾಣಬರುತ್ತದೆ. ಗೆಳತಿ ಜುಬೇದಾ ಆನಾರೋಗ್ಯದ ಸಮಸ್ಯೆಯಿಂದ ಆಸ್ಪತ್ರೆಗೆ ಹೋಗುತ್ತಿದ್ದಾಗ ಅಲ್ಲಿನ ವೈದ್ಯ ಮತ್ತು ಜುಬೇದಳಾ ನಡುವೆ ಸಂಬಂಧವೇರ್ಪಟ್ಟು, ಜುಬೇದಾ ಆತ್ಮಹತ್ಯೆ ಮಾಡಿಕೊಂಡುದು; ಲೀಲಾವತಿ ಪೋಲೀಸ್‌ರ ಮಗಳಾಗಿ, ತುಂಬಾ ಸುಖದಿಂದ ಬೆಳೆದರೂ ಕಾಲ ಕಳೆದಂತೆ ಅವರ ತಂದೆಯ ಮರಣದಿಂದ ಅವಳ ಸುಖದ ದಿನಗಳು ಕಣ್ಮರೆ ಆಗಿ, ತುಂಬಾ ಕಿತ್ತು ತಿನ್ನುವ ಬಡತನದಿಂದ ಅವಳ ವಿದ್ಯಾಭ್ಯಾಸ ನಿಂತುದು ಮುಂತಾದ ಸಂಗತಿಗಳು ಹೇಗೆ ಹೆಣ್ಣುಮಕ್ಕಳ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿತ್ತವೆ ಎಂಬುದಕ್ಕೆ ಉದಾಹರಣೆಗಳಾಗಿ ನಿಲ್ಲುತ್ತವೆ. ಈ ಘಟನೆಗಳು ಲೇಖಕಿ ಉನ್ನತ ಶಿಕ್ಷಣ ಪಡೆಯಬೇಕು ಮತ್ತು ಉದ್ಯೋಗ ಪಡೆಯಬೇಕು ಎಂಬ ಅಛಲವಾದ ನಿರ್ಧಾರಗಳಿಗೆ ಕಾರಣವಾದುದನ್ನು ದಾಖಲಿಸಿದ್ದಾರೆ.

ಮುಂದಿನದು ಲೇಖಕಿಯ ಔದ್ಯೋಗಿಕ ಬದುಕಿನ ವಿವರಗಳನ್ನು **ಅಧ್ಯಾಪಕಿಯಾಗಿ ಮೊದಲ ದಿನಗಳು, ರೈಲು ಜೀವನ ಪಾಠ, ಹೊಸಲೋಕ**- ಈ ಹೆಜ್ಜೆಗಳಲ್ಲಿ ಕಾಣುತ್ತೇವೆ. 1986-ಜುಲೈ-15 ರಂದು ಮಹಾರಾಜ ಕಾಲೇಜಿಗೆ ಸಮಾಜಶಾಸ್ತ್ರದ ಅಧ್ಯಾಯಪಕಿಯಾಗಿ ತಮ್ಮ ಜೀವನ ವೃತ್ತಿಯ ಮೊದಲ ದಿನಗಳನ್ನು ಪ್ರಾರಂಭಿಸಿದಾಗ ಕೂರಲು ಸ್ಥಳ-ಕುರ್ಚಿಯ ಅಭಾವವಾದುದು, ಮಹಿಳೆಯರು ಕುಳಿತುಕೊಳ್ಳುವ ಜಾಗಕ್ಕೆ `ಅಕ್ಕನ ಮೂಲೆ' ಎಂದು ಹೆಸರಿಟ್ಟಿದ್ದಿದ್ದು, ಲವ್ ಎಂದರೇನು ಮೇಡಂ ? ಎಂದು ವಿದ್ಯಾರ್ಥಿಗಳು ಪಾಠದ ನಡುವೆ ಪ್ರಶ್ನಿಸಿದ್ದು, ತನಗಿಂತ ವಯಸ್ಸಿನಲ್ಲಿ ದೊಡ್ಡವರಾಗಿದ್ದ, ವಿವಾಹಿತರಾಗಿದ್ದ ವಿದ್ಯಾರ್ಥಿಗಳು ಅಸಡ್ಡೆಯಿಂದ ಕಾಣುತ್ತಿದ್ದುದು, ಮುಂತಾದ ಸಂಗತಿಗಳನ್ನು ಹೇಳುವ ಮೂಲಕ ಪುರುಷಪ್ರಧಾನ ವ್ಯವಸ್ಥೆಯೊಳಗಿನ ಹೆಣ್ಣಿನ ತಲ್ಲಣಗಳನ್ನು, ಉದ್ಯೋಗವೆಂಬುದು ಹೆಣ್ಣಿಗೆ ಅಷ್ಟು ಸರಳವಾಗಿರಲಿಲ್ಲ ಎಂಬ ಶಿಕ್ಷಿತ ಹೆಣ್ಣೂ ಕೂಡ ವಿದ್ಯಾವಂತ ಅಧ್ಯಾಪಕ ವಲಯದಲ್ಲಿ ಅನುಭವಿಸಿದ ಮುಜುಗರದ ವಿಚಾರಗಳ ಜೊತೆ ಮಹಾರಾಜ ಕಾಲೇಜಿನ ಅಧ್ಯಾಪಕ ವಲಯದ ಚರ್ಚೆಗಳು, ಗ್ರಂಥಾಲಯ ಹಾಗು ಕಾಲೇಜಿನ ಬೌದ್ಧಿಕತೆಯ ವಾತಾವರಣವನ್ನೂ ಲೇಖಕಿ ದಾಖಲಿಸಿದ್ದಾರೆ. ಉದ್ಯೋಗಸ್ಥ ಮಹಿಳೆಯರ ಒತ್ತಡದ ಜೀವನಶೈಲಿಯನ್ನೂ, ಹಾಲು ಹಾಕುವ ಮಹಿಳೆಯ ಬದುಕನ್ನೂ **ರೈಲು ಜೀವನ ಪಾಠ**ದಲ್ಲಿ ಕಾಣಬಹುದಾಗಿದೆ.

ಅಧ್ಯಾಪಕಿಯಾಗಿ ಜೀವನವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಲೇಕಕಿಯ ವಿವಾಹಕ್ಕೆ ಅವರ ಬಂಧುಗಳೇ ತೊಂದರೆಯಾದುದು, ಲೇಖಕಿಯು ಶಿಕ್ಷಿತಳಾದುದೇ ವಿವಾಹಕ್ಕೆ ಅಡ್ಡಿಯಾದುದು, ಈ ವಿಚಾರವಾಗಿ ಜನರ ಚುಚ್ಚುಮಾತುಗಳು, ಉದ್ಯೋಗಸ್ಥ ಮಹಿಳೆಯನ್ನು ವಿವಾಹವಾಗುವುದೇ ಔದಾರ್ಯ ಎನ್ನುವಂಥಹ ಗಂಡನ್ನು ತಂದೆ ನಿರಾಕರಿಸಿದಾಗ ಲೇಖಕಿಗಾದ ಸಂತೋಷ, ಉದ್ಯೋಗ ಬಿಟ್ಟರೆ ವಿವಾಹವಾಗುವುದಾಗಿ ಹೇಳಿದ ಟಾಟಾ ಸಂಸ್ಥೆಯ ವಿಜ್ಞಾನಿಯಾದ ವರನನ್ನು ಲೇಖಕಿ ನಿರಾಕರಿಸಿದ್ದು, ನಂತರದಲ್ಲಿ ಇಂಜಿನಿಯರ್ ಶೇಖರ್ ಎಂಬುವರನ್ನು ಮದುವೆಯಾದುದು, ಅವರು ಹೃದಯಾಘಾತದಿಂದ 7 ತಿಂಗಳಿಗೇ ತೀರಿಹೋಗಿ ಲೇಖಕಿ ವಿಧವೆಯಾದುದು ಮುಂತಾಗಿ ಅಂದಿನ ಕಾಲಘಟ್ಟದಲ್ಲಿ ಉದ್ಯೋಗಸ್ಥ ಮಹಿಳೆಯು ವಿವಾಹವಾಗುವುದು ಎಷ್ಟು ಕಷ್ಟಕರವಾಗಿತ್ತೆಂಬ ಸಂಗತಿಗಳನ್ನು; ವಿವಾಹವೆಂಬುದು ತಾಯಂದಿರಿಗೆ ಎಷ್ಟು ಹೊಣೆಗಾರಿಕೆಯಾಗಿತ್ತು ಎಂಬ ವಿವರಗಳನ್ನು **ಮದುವೆ** ಎಂಬ ಹೆಜ್ಜೆಭಾಗ ಕಟ್ಟಿಕೊಡುತ್ತದೆ.

ಲೇಖಕಿ ತಮ್ಮ ದೂರದ ಸಂಬಂಧಿಯಾದ ರಾಜಶೇಖರ್ ಅವರ ಜೊತೆ ಮನೆಯವರ ಒಪ್ಪಿಗೆ ಪಡೆದು ದಾಂಪತ್ಯ ಜೀವನಕ್ಕೆ ಕಾಲಿಟ್ಟು, ಸುಖದಿಂದ ನಡೆಯುತ್ತಿದ ಸಂಸಾರದಲ್ಲಿ ರಾಜಶೇಖರ್ ಅವರು ಮರಣ ಹೊಂದಿದಮೇಲೆ ಗರ್ಭಿಣಿಯಾಗಿದ್ದಾಗ ಅನುಭವಿಸಿದ ಸಂಕಟಗಳ ಸ್ಥಿತಿಯನ್ನು ಕಂಡು ಕೆಲವರು ಅಯ್ಯೋ ಎಂದು ಮರುಕ ಪಟ್ಟರೆ; ಸಂಕಟಕ್ಕೆ ನೆರವಾದ ತಮ್ಮ ದಶರಥ, ಗೆಳತಿ ಸರ್ವಮಂಗಳಾ, ಮಂಗಳಾ ಅವರ ಅಮ್ಮ ಮತ್ತು ಸರಸ್ವತಿ ಬೋರಲಿಂಗಯ್ಯ ಮುಂತಾದವರು ಮಾಡಿದ ಬಸುರಿನ ಬಯಕೆಯ ಆರೈಕೆ, ಮಗುವಾದ ಮೇಲೆ ಭೆಟಿಯಾದ ರತ್ನಾ ಎಂಬ ಗೆಳತಿಯ ನೆನಪುಗಳು- ಹೀಗೆ ಒಬ್ಬ ಒಂಟಿ ಮಹಿಳೆ ಈ ಸಮಾಜದಲ್ಲಿ ಬದುಕನ್ನು ಕಟ್ಟಿಕೊಳ್ಳುವುದು, ಎದುರಿಸುವುದು ಅಂತಹ ಕಷ್ಟದ ಸಂದರ್ಭದಲ್ಲೂ ಕೂಡ ತಮ್ಮ ವಿಶ್ವಾಸ ಛಲದಿಂದ ತಮ್ಮ ಬದುಕನ್ನು ಕಟ್ಟಿಕೊಂಡಬಗೆಯನ್ನು ಲೇಖಕಿ **ಮದುವೆ** ಹೆಜ್ಜೆಯಲ್ಲಿ ಬರಹರೂಪಕ್ಕಿಳಿಸಿದ್ದಾರೆ.

ಸುಮಿತ್ರಾಬಾಯಿಯವರ ಇಲ್ಲಿಯವರೆಗಿನ 24 ಹೆಜ್ಜೆಗಳು ಒಂದು ಭಾಗವಾದರೆ ಮುಂದಿನ **ಮರುಮದುವೆ, ದೇಮಾನೊಂದಿಗೆ ದೆಹಲಿಗೆ, ದಲಿತ ಸ್ಫೋಟ, ಅಪ್ಪನಿಲ್ಲದ ಮನೆಯಲ್ಲಿ, ಮಕ್ಕಳೊಂದಿಗೆ, ದೇಮಾನ ಬೇಸಾಯ** ಮುಂತಾದ 24 ಹೆಜ್ಜೆಗಳು ಅವರ ನವಜೀವನದ ಮತ್ತೊಂದು ಭಾಗವಾಗುತ್ತದೆ. ದೇವನೂರು ಮಹಾದೇವ ಅವರೊಂದಿಗೆ ಮರುಮದುವೆಯ ಹೆಜ್ಜೆಯೊಂದಿಗೆ ಪ್ರಾರಂಭವಾಗಿ, ದೇವನೂರರ ವಿದ್ಯಾರ್ಥಿ ಜೀವನ, ಅಶೋಖಪುರಂನಲ್ಲಿ ಅವರೊಂದಿಗಿನ ಸಾಂಸಾರಿಕ ಬದುಕು, ಚಳುವಳಿ, ಹೋರಾಟ, ದಂಪತಿಗಳು ಮಲೆಯ ಮಹದೇಶ್ವರನಿಗೆ ಹರಕೆಯೊಪ್ಪಿಸಿದ ಪರಿ, ಪ್ರಾಂಶುಪಾಲೆಯಾಗಿ ಲೇಖಕಿ ಬಡ್ತಿ ಪಡೆದುದು, ಯುವರಾಜ ಕಾಲೇಜಿಗೆ ಯುವರಾಣಿಯಾಗಿ ಬಂದುದು ಮುಂತಾದ ಅನೇಕ ಸಂಗತಿಗಳನ್ನು ಪ್ರತ್ಯೇಕವಾಗಿಯೇ ಗಮನಿಸಬೇಕಾಗುತ್ತದೆ.

ಸುಮಿತ್ರಾ ಅವರ ಪತಿ ತೀರಿಕೊಂಡು ಮಗುವಾದಮೇಲೂ ಅವರ ಒಬ್ಬ ವಿದ್ಯಾರ್ಥಿಯಾಗಿದ್ದ ದೇವನೂರುಮಹಾದೇವ ಅವರು ಇವರನ್ನು ಮರು ಮದುವೆಯಾಗುವ ವಿಷಯದ ಬಗ್ಗೆ ಮಾತಾಡಿದಾಗ ಅದರ ಬಗ್ಗೆ ನನಗೆ ಒಲವಿಲ್ಲ ಎಂದು ತಿಳಿಸುತ್ತಾರೆ. ಇವರ ಸ್ನೇಹಿತರು ಮತ್ತು ಅವರ ಕೆಲವು ಸಂಬಂಧಿಕರು ಕೂಡ ಮರುವಿವಾಹದ ಬಗ್ಗೆ ಚರ್ಚಿಸಿದಾಗ ಮೊದಲಿಗೆ ಈ ವಿಷಯದ ಬಗ್ಗೆ ಮಾತಡಿದ್ದ ವಿದ್ಯಾರ್ಥಿಯಾದ ದೇವನೂರು ಮಹದೇವ ಅವರ ಜೊತೆ ಮರುಮದುವೆ ಮಾಡಿಕೊಂಡರು. ಧರ್ಮ, ಜಾತಿ, ಕುಲ, ಗೋತ್ರಗಳೆಂಬ ಕೋಟೆಗಳಿಂದ ಸುತ್ತುವರಿದ ಈ ಸಮಾಜದಲ್ಲಿ ಲೇಖಕಿಯ ನಿಲುವು ಕ್ರಾಂತಿಕಾರಿಯಾದುದೇ ಆಗಿದೆ. ಇದು ಅವರ ನಿಜವಾದ ಸ್ತ್ರೀವಾದಿ ನಿಲುವಿನ ಮಾರ್ಗದರ್ಶನವೆನಿಸುತ್ತದೆ.

ಜಗತ್ತಿನಲ್ಲಿ ಎಲ್ಲಾ ಸಂಸಾರದಲ್ಲೂ ಒಂದಲ್ಲಿ ಒಂದು ರೀತಿಯ ಸಮಸ್ಯೆಗಳು ಇದ್ದೇ ಇರುತ್ತದೆ. ತವರುಮನೆಯಲ್ಲಿ ತಂದೆ-ತಾಯಿಯರನ್ನು ಕಳೆದುಕೊಂಡು ತಾಯಿ ಚಿಕ್ಕ ತಮ್ಮಂದಿರು ತಂಗಿಯರ ಜವಾಬ್ದಾರಿ. ತಂಗಿಯ ಮದುವೆ ಮತ್ತು ಮಕ್ಕಳ ವಿದ್ಯಾಭ್ಯಾಸ, ಮನೆ, ಮಕ್ಕಳು, ತನ್ನ ವೃತ್ತಿ ಎಲ್ಲದರ ಜವಾಬ್ದಾರಿಯನ್ನು ನಿಭಾಯಿಸುವ ಒಬ್ಬ ಹೆಣ್ಣಿಗೆ ಅವಳ ಕೌಟುಂಬಿಕ ಬದುಕಿನ ಒತ್ತಡದ ನಡುವೆಯೂ ತನ್ನ

ಔದ್ಯೋಗಿಕ ಜವಾಬ್ದರಿಯನ್ನು ಕೂಡ ನಿರ್ವಹಿಸಲೆಬೇಕು. ಈ ಎಲ್ಲ ವಿವರಗಳು **ಅಪ್ಪನಿಲ್ಲದ ಮನೆಯಲ್ಲಿ** ಎಂಬ ಭಾಗದಲ್ಲಿ ದಾಖಲಾಗಿವೆ. ಹಾಗೆಯೇ ಈ ಸಾಂಸಾರಿಕ ಮತ್ತು ಔದ್ಯೋಗಿಕ ಬದುಕಿನ ನಡುವೆ ಅವರ ಪತಿ ಮಹಾದೇವ ಅವರು ತಮ್ಮ ಜಮೀನಿನಲ್ಲಿ ಬೆಳೆದಂತಹ ಮೂಲಂಗಿಯನ್ನು ಕುರಿತು "**ಒಂದೋತ್ತಿನ ಸಾರಿಗೆ ಸಾವಿರ ಮೂಲಂಗಿ**" ಎಂಬ ಒಂದು ವಿಡಂಬನ ಬರಹವನ್ನು ಲೇಖಕಿ ಬರೆಯುತ್ತಾರೆ. **ದೇಮಾನ ಬೇಸಾಯದ** ಹೆಜ್ಜೆಯಲ್ಲಿ ಇದು ದಾಖಲಾಗಿದೆ. ಇದು ಮುಂದೆ ಇವರ ಈ ಆತ್ಮಕಥನ ಬರೆಯಲು ಆತ್ಮವಿಶ್ವಾಸವನ್ನು ಕೊಟ್ಟಂತಹ ಬರಹವಾಗುತ್ತದೆ.

ದಾಂಪತ್ಯ ಜೀವನಕ್ಕೆ ಮೊದಲು ಬೇಕಾದುದು ನಂಬಿಕೆ, ವಿಶ್ವಾಸ, ಪ್ರೀತಿ, ಇದು ಇದ್ದರೆ ಮಾತ್ರ ದಾಂಪತ್ಯ ಜೀವನ ಆನಂದಮಯವಾಗುತ್ತದೆ. ಸುಮಿತ್ರ ಅವರ ನಡವಳಿಕೆಯನ್ನು ಕುರಿತು ಒಂದು ಅನಾಮಧೇಯ ಪತ್ರವೊಂದು ಸುಮಿತ್ರ ಅವರಿಗೆ ಬಂದಾಗ ಅದನ್ನು ಪತಿಯೊಂದಿಗೆ ಚರ್ಚಿಸಲು ನಿರ್ಧಾರ ಮಾಡಿದಾಗ ಅದರ ಬಗ್ಗೆ ಮೊದಲೆ ತಿಳಿದಿದ್ದ ಮಹಾದೇವ ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡ ಎಂದು ಹೇಳುತ್ತಾರೆ. ಈ ಘಟನೆ ದಾಂಪತ್ಯಕ್ಕೆ ಇರಬೇಕಾದ ನಂಬಿಕೆ ವಿಶ್ವಾಸಗಳ ಅಡಿಪಾಯದ ಆದರ್ಶವಾಗಿದೆ.

ಒಟ್ಟಾರೆಯಾಗಿ ``ಎಲ್ಲಿಯೂ ಅಷ್ಟಾಗಿ ಪ್ರಸ್ತಾಪಕ್ಕೆ ಬರದೇ ಹೋದ ಕನ್ನಡದ ಸೂಕ್ಷ್ಮಗ್ರಾಹಿ ಲೇಖಕ ದೇವನೂರ ಮಹಾದೇವ ಅವರ ಜೀವನ ಸಂಗತಿಗಳೂ ಕೂಡ ವಿಶೇಷ, ವಿಸ್ಮಯ ಅನ್ನುವಂತೆ ಕೃತಿಯಲ್ಲಿ ಸೇರ್ಪಡೆಯಾಗಿವೆ. ಒಬ್ಬ ಪ್ರಜ್ಞಾವಂತ ಮಹಿಳೆಯ ಜೀವನ ಕಥನ ಅನೇಕ ಸುಳಿಗಳಲ್ಲಿ ಸ್ಥಿರವಾಗಿ ನಿಲ್ಲುತ್ತ, ಬೆಳೆಯುತ್ತ,ಶಕ್ತವಾಗುತ್ತ ನಡೆದು ಹೆಜ್ಜೆ ಮೂಡಿಸಿದಂತಿರುವ ಈ ಕೃತಿ, ಅದರ ಹಾದಿಯುದ್ದಕ್ಕೂ ಪುಸ್ತಕಪ್ರಿಯರನ್ನು ಬಿಡದೆ ಓದಿಸಿಕೊಳ್ಳುವಂತಿದೆ' ' ಎಂಬ ಕೃಷ್ಣಮೂರ್ತಿ ಹನೂರರ ಮಾತಿಗೆ ನನ್ನದೂ ಸಹಮತವಿದೆ.

**ಪರಾಮರ್ಶನ ಕೃತಿಗಳು**

1.**ಸೂಲಾಡಿ ಬಂದೋ ತಿರುತಿರುಗೀ**- ಪ್ರೊ. ಕೆ ಸುಮಿತ್ರಾಬಾಯೀ, ಅಭಿರುಚಿ ಪ್ರಕಾಶನ, ಮೈಸೂರು, 2018.

2.**ಹೊಸಗನ್ನಡ ಸಾಹಿತ್ಯಚರಿತ್ರೆ** : ಎಲ್.ಎಸ್.ಶೇಷಗಿರಿರಾವ್, ಸ್ವಪ್ನ ಬುಕ್‌ಹೌಸ್, ಬೆಂಗಳೂರು, 2013.

3.**ವಿಶ್ವಕೋಶ** : ಮೈಸೂರು ವಿಶ್ವವಿದ್ಯಾನಿಲಯ.

4.**ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ** : ಎ.ಜಿ.ಶರಣಮ್ಮ, ಗೋರೆಬಾಳ ಪ್ರಕಾಶನ, ಧಾರವಾಡ, 2011.